ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ಕಛೇರಿ-6, ಕೆ.ಐ.ಎ.ಡಿ.ಬಿ.ಕಟ್ಟಡ, 'ಬಿ' ಬ್ಲಾಕ್, 3ನೇ ಮಹಡಿ, 4 ನೇ ಹಂತ, ಪೀಣ್ಯ 2ನೇ ಹಂತ, ಬೆಂಗಳೂರು-560 058.
ದೂರವಾಣಿ ಸಂಖ್ಯೆ: 080-28363927.

ಸಂಖ್ಯೆ:ವಾತೆಜಂಆ(ಆ)/ಡಿಜಿಎಸ್‌ಟಿಓ-06/ಖಾ.ವಾ.ಟೆ/ಸಿಆರ್-08/2022-23 ದಿನಾಂಕ:07-02-2023.

# ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ), ವಿಭಾಗೀಯ ಸರಕು ಮತ್ತು ಸೇವಾ ಕಛೇರಿ-6, ಕೆ.ಐ.ಎ.ಡಿ.ಬಿ.ಕಟ್ಟಡ, ಬಿ' ಬ್ಲಾಕ್, 3ನೇ ಮಹಡಿ, 4ನೇ ಹಂತ, ಪೀಣ್ಯ 2ನೇ ಹಂತ, ಬೆಂಗಳೂರು-58 ಮತ್ತು ಇವರ ಅಧೀನ ಕಛೇರಿಯ ಉಪಯೋಗಕ್ಕಾಗಿ (ಬೆಂಗಳೂರು ನಗರ ಕಛೇರಿಗಳಿಗೆ – 08 ಮತ್ತು ಅಧೀನ ಕಛೇರಿಗಳಾದ ತಿಪಟೂರು – 01, ಮಧುಗಿರಿ – 01, ಮತ್ತು ತುಮಕೂರು – 02) ಒಟ್ಟು 12 (ಹನ್ನೆರಡು) ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳು ಬಾಡಿಗೆ ಮೇರೆಗೆ ಅವಶ್ಯಕತೆ ಇದ್ದು, ಈ ಸಂಬಂಧ ಇಲಾಖೆಯ ಸೂಚನಾ ಫಲಕಕ್ಕೆ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಅಂಟಿಸಲಾಗಿದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್-96. ಶಿವಾನಿ 2012, ದಿನಾಂಕ:23-08-2012ರಲ್ಲಿ ತಿಳಿಸಿರುವ ನಿಯಮಗಳನ್ವಯ ಹಾಗೂ ಆಯುಕ್ತರ ಅನುಮತಿ ಪತ್ರ ದಿನಾಂಕ:22-12-2022 ರನ್ವಯ ತಯಾರಿಕ ವರ್ಷ-2018 (Manufacturing Year 2018 onwards i.e., M.Y 2018) ನಂತರದ ಮಾದರಿಯ ವಾಹನಗಳನ್ನು ಹೊಂದಿರುವ ಮಾಲೀಕರೇ ಚಾಲಕರಾಗಿರುವ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸರ್ಕಾರಿ ಇಲಾಖೆಯಲ್ಲಿ ಕನಿಷ್ಠ 2 ವರ್ಷದ ಅವಧಿಗೆ ಮಾಲೀಕರೇ ಚಾಲಕರಾಗಿ ವಾಹನ ಚಾಲನೆ ಪದ್ಧತಿಯಲ್ಲಿ ಸೇವೆ ಸಲ್ಲಿಸಿರುವ ಅರ್ಜಿದಾರರಿಗೆ ಆದ್ಯತೆ ನೀಡಲಾಗುವುದು.

ಆಸಕ್ತರು ವಾಹನಗಳ ಸಂಬಂಧಪಟ್ಟ ದಾಖಲಾತಿಗಳಾದ – ನೋಂದಣಿ ಪತ್ರ, ವಿಮೆ, ಟಾಕ್ಸ್ ಕಾರ್ಡ್, ರಹದಾರಿ ಅನುಮತಿ ಪತ್ರ (ಪರ್ಮಿಟ್), ಸ್ವಂತ ವಾಹನದ ಚಾಲಕರಾಗಿರುವುದನ್ನು ಪ್ರಮಾಣಿಕರಿಸಿರುವ ಡ್ರೈವಿಂಗ್ ಲೈಸೆನ್ಸ್, ಅನುಭವ ಪ್ರಮಾಣ ಪತ್ರ, ಇತ್ಯಾದಿ ಅಗತ್ಯ ದಾಖಲಾತಿಗಳೊಂದಿಗೆ **ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು(ಕೇ.ಕ)**, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಛೇರಿ (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-06, ಕೆ.ಐ.ಎ.ಡಿ.ಬಿ.ಕಟ್ಟಡ, ಬಿ' ಬ್ಲಾಕ್, 3ನೇ ಮಹಡಿ, 4ನೇ ಹಂತ, ಪೀಣ್ಯ 2ನೇ ಹಂತ, ಬೆಂಗಳೂರು-58 ಬೆಂಗಳೂರು, ದೂರವಾಣಿ ಸಂಖ್ಯೆ: 080-28363927, 28363426 ಇಲ್ಲಿ ದಿನಾಂಕ:21-02-2023 ರಂದು ಸಂಜೆ: 4:00 ಗಂಟೆ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**ಸೂಚನೆ:-** ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಸಂಖ್ಯೆಯನ್ನು ಅವಶ್ಯಕತೆಗನುಗುಣವಾಗಿ ಬದಲಾವಣೆ ಮಾಡಲಾಗುವುದು.

**ಗುತ್ತಿಗೆ ಅವಧಿ:** 01.04.2023 ರಿಂದ 31.03.2024 ರವರೆಗೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ಕಛೇರಿ-6,ಬೆಂಗಳೂರು.

ಇವರಿಗೆ:-

1. ಸೂಚನಾ ಫಲಕಕ್ಕೆ.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

ಸಂಖ್ಯೆ:ವಾತೆಜಂಆ(ಆ)/ವಿ.ಸ.ಸೇ.ತೆ.ಕ-6/ಖಾ.ವಾ.ಟೆ/
ಸಿಆರ್-08/2022-23.
ಖಿ.ನಿ 4671/22-23

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6,
ಕೆಐಎಡಿಬಿ ಕಟ್ಟಡ, ಬಿ-ಬ್ಲಾಕ್, 3ನೇ ಮಹಡಿ,
4ನೇ ಫೇಸ್, ಪೀಣ್ಯ 2ನೇ ಹಂತ, ಬೆಂಗಳೂರು,
ದಿನಾಂಕ:07-02-2023.

# ಟೆಂಡರ್ ಅಧಿಸೂಚನೆ

ವಿಷಯ:- ದಿನಾಂಕ:01-04-2023 ರಿಂದ 31-03-2024ರ ಅವಧಿಯವರೆಗೆ ಈ ಕಛೇರಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ 12 ಚಾಲಕರೇ ಮಾಲೀಕರಾಗಿರುವ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ರವರ ಪತ್ರ ಸಂ: ಆ ಇ 59/ವಾ.ತೆ.ಇ-2016 ದಿನಾಂಕ:30-03-2016.
2. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ರವರ ಪತ್ರ ಸಂ: ಆ ಇ 59/ವಾ.ತೆ.ಇ-2017 ದಿನಾಂಕ:08-05-2017.
3. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ ಆಇ 156 ವೆಚ್ಚ-12-2019 ದಿನಾಂಕ:22-03-2022.
4. ಸರ್ಕಾರದ ಆದೇಶ ಸಂ: ಸಿಆಸುಇ 30 ಶಿವಾನೀ 2019, ಬೆಂಗಳೂರು ದಿನಾಂಕ:31-03-2022.
5. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಸುತ್ತೋಲೆ ಸಂ: ವಿಹೆಚ್‌ಟಿ ಸಿ.ಆರ್.22/19-20 ದಿನಾಂಕ: 27-04-2022.
6. ಮಾನ್ಯ ಆಯುಕ್ತರವರ ಆದೇಶ ಸಂ: ವಿಹೆಚ್‌ಟಿಸಿ.ಆರ್.15/22-23 ದಿನಾಂಕ: 01-08-2022.
7. ವಾಣಿಜ್ಯ ತೆರಿಗೆ ಆಯುಕ್ತರವರ ಆದೇಶ ಸಂಖ್ಯೆ: ವಿಹೆಚ್‌ಟಿಸಿ.ಆರ್.15/22-23 ದಿನಾಂಕ:22-12-2022.

*******

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ಬೆಂಗಳೂರು ಈ ಕಛೇರಿಯ ಮತ್ತು ಅಧೀನ ಕಛೇರಿಗಳ ಉಪಯೋಗಕ್ಕಾಗಿ ಮಾಲೀಕರೇ ಚಾಲಕರಾಗಿರುವ **12(ಹನ್ನೆರಡು)** ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖ(8)ರಲ್ಲಿ ತಿಳಿಸಿರುವ ಮಾನ್ಯ ಆಯುಕ್ತರವರ ಪತ್ರದಲ್ಲಿ ಅನುಮತಿಸಿರುವುದರಿಂದ, ಮಾಲೀಕರೇ ಚಾಲಕರಾಗಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ / ಚಾಲಕರು 01 ವಾಹನ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 156 ವೆಚ್ಚ-12-2019 ದಿನಾಂಕ:22-03-2022, ಪ್ರಸ್ತುತ ಹಿಂಬರಹದಲ್ಲಿ ಆರ್ಥಿಕ ಇಲಾಖೆಯು ದರ ಪರಿಷ್ಕರಿಸಲು ಸಹಮತಿಸಿ ಆದೇಶಿಸಿದ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನೀ 2019, ಬೆಂಗಳೂರು ದಿನಾಂಕ:31-03-2022 ರಲ್ಲಿ ತಿಳಿಸಿರುವ ನಿಯಮಗಳನ್ವಯ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.